# ಲೇಹ್–ಲಡಾಕಿನ ಮೋಹಕ ಮೊನಸ್ಟರಿ

■ ಚಿತ್ರ– ಲೇಖನ: **ಗೀತಾ ಕುಂದಾಪುರ**



ಜಮ್ಮು ಮತ್ತು ಕಾಶ್ಮೀರದ ಒಂದು ಪ್ರಾಂತ್ಯವಾಗಿರುವ ಲಡಾಕ್ ಸುಂದರ ಪ್ರದೇಶ. ಹಿಮಾಲಯದ ಪರ್ವತ ಶ್ರೇಣಿಗಳಾದ ಝುಂಕಾರ್, ಲಡಾಕ್ ಮತ್ತು ಕಾರಕೋರಂಗಳಿಂದ ಸುತ್ತುವರಿದ ಸುಂದರ ದೃಶ್ಯಗಳ ತಾಣವಿದು. ಶ್ಯಾಕ್, ಸಿಂಧೂ ಮತ್ತು ಝುಂಕಾರ್ ನದಿಗಳು ಹರಿಯುವ ಈ ಕಣಿವೆ ಪ್ರದೇಶಗಳಲ್ಲಿ ಜನ ವಾಸವಿದೆ. ಬೌದ್ಧ ಧರ್ಮ ಇಲ್ಲಿನ ಜನರು ಅನುಸರಿಸುತ್ತಿರುವ ಪ್ರಮುಖ ಧರ್ಮ.

ಇಲ್ಲಿ ಎಲ್ಲೆಲ್ಲೂ ಬೌದ್ಧ ಧರ್ಮದ ಸ್ತೂಪಗಳು, ಮೊನಸ್ಟರಿ (ಮಠ, ಸ್ಥಳೀಯರ ಭಾಷೆಯಲ್ಲಿ ಗೊಂಪ)ಗಳನ್ನು ಕಾಣಬಹುದು. ಲಡಾಕ್ ಅತ್ಯಂತ ಕಡಿದಾದ ಭೂಪ್ರದೇಶ. ವರ್ಷದ ಬಹುತೇಕ ಅವಧಿಯಲ್ಲಿ ಹಿಮದಿಂದ ಮುಚ್ಚಿರುವ, ಕೊರೆವ ಚಳಿಯ ಊರು. ಆಮ್ಲಜನಕದ ಕೊರತೆಯಿಂದ ಉಸಿರಾಡುವುದೂ ಕಷ್ಟ. ಹಾಗಿದ್ದೂ ಬೌದ್ಧ ಸನ್ಯಾಸಿಗಳು, ಅನುಯಾಯಿಗಳು ಇಲ್ಲಿ ಮಠಗಳನ್ನು ಕಟ್ಟಿ ವಾಸಿಸುತ್ತಿದ್ದಾರೆ. ಕೆಲವು ಅಳಿವಿನಂಚಿನಲ್ಲಿದ್ದರೆ, ಕೆಲವು ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರಗಳಾಗಿವೆ.

ಎಲ್ಲ ಮೊನಸ್ಟರಿಗಳ ವಾಸ್ತು ಶಿಲ್ಪವು ಬೌದ್ಧ, ಲಡಾಕಿ ಹಾಗೂ ಟಿಬೇಟಿಯನ್ ಶೈಲಿಯಲ್ಲಿದೆ. ಮೊನಸ್ಟರಿಗಳೆಲ್ಲಾ ಎತ್ತರದಲ್ಲಿದ್ದು ಹಲವು ಮೆಟ್ಟಿಲುಗಳನ್ನು ಹತ್ತಿ ಹೋಗುವುದು ಕಷ್ಟವಾದರೂ ಒಳ ಹೊಕ್ಕಾಗ ವಿಶಿಷ್ಟ ನೆಮ್ಮದಿ ಸಿಕ್ಕಿದ್ದಂತೂ ನಿಜ.

**ತಿಕಸೆ ಮೊನಸ್ಟರಿ (Thiksey Monastery):** ಸಿಂಧೂ ಕಣಿವೆಯಿಂದ



ಶಾಂತಿ ಸ್ತೂಪ